**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1001(1129 )
ಸದಸ್ಯರ ಹೆಸರು : ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 17-03-2025
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡು ಖಾಯಂ ಆಗಿರುವ ಶಿಕ್ಷಕರು/ ಉಪನ್ಯಾಸಕರ ವೇತನವನ್ನು ಪುನರ್ ನಿಗದಿಪಡಿಸಲು ಸರ್ಕಾರ ಮುಂದಾಗಿದೆಯೇ; ಇದ್ದಲ್ಲಿ, ಸೂಕ್ತ ಕಾರಣಗಳನ್ನು ತಿಳಿಸುವುದು: | 1984 ರಿಂದ 1991 ರ ಅವಧಿಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಶಿಕ್ಷಕರ/ಉಪನ್ಯಾಸಕರ ಸೇವೆಯನ್ನು ಕರ್ನಾಟಕ ನಾಗರಿಕ ಸೇವಾ (ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಶಿಕ್ಷಕರ/ಉಪನ್ಯಾಸಕರ ಸೇವಾ ವಿಲೀನ) (ವಿಶೇಷ) ನಿಯಮಗಳು, 1990 (ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 239 ಎಸ್‌ಇಎಸ್ 1988 ದಿನಾಂಕ:19/02/1991) ರನ್ವಯ ಸಕ್ರಮಗೊಳಿಸಲಾಗಿದೆ. ಸದರಿ ನಿಯಮಗಳ ನಿಯಮ 4(1)ರಂತೆ ಈ ಉಪನ್ಯಾಸಕರುಗಳಿಗೆ ನೇಮಕಾತಿ ಹೊಂದಿದ ದಿನಾಂಕದಿಂದ ಕಾಲ್ಪನಿಕವಾಗಿ ವೇತನ ನಿಗದಿಗೊಳಿಸಲಾಗಿತ್ತು.<br><br>ತದನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 12 ಎಸ್‌ಆರ್‌ಇ 1997 ದಿನಾಂಕ:08-10-1999ರಲ್ಲಿ 1990ರ ವಿಶೇಷ ನಿಯಮಗಳ ನಿಯಮ-4(1)ಕ್ಕೆ ತಿದ್ದುಪಡಿ ತರಲಾಗಿದೆ. ಅದರನ್ವಯ ಸೇವಾ ವಿಲೀನಗೊಳಿಸಿದ ದಿನಾಂಕದಂದು ಅವರುಗಳ ವೇತನವನ್ನು ವೇತನ ಶ್ರೇಣಿಯ ಕನಿಷ್ಠ ವೇತನಕ್ಕೆ ನಿಗದಿಪಡಿಸಬೇಕಾಗುತ್ತದೆ. ಸದರಿ ತಿದ್ದುಪಡಿ ನಿಯಮ ಜಾರಿಗೆ ಬರುವ ಪೂರ್ವದಲ್ಲಿ ವಿಶೇಷ ನಿಯಮಗಳ ನಿಯಮ 4(1) ರನ್ವಯ ವೇತನ ನಿಗದಿಪಡಿಸಲಾಗಿದ್ದ ಪ್ರಕರಣಗಳಲ್ಲಿ ಅಂತಹ ಉಪನ್ಯಾಸಕರುಗಳಿಗೆ ಕಾಲ್ಪನಿಕವಾಗಿ ಎಷ್ಟು ವಾರ್ಷಿಕ ವೇತನ ಬಡ್ತಿಗಳನ್ನು ನೀಡಿ ವೇತನ ನಿಗದಿಗೊಳಿಸಲಾಗಿದೆಯೋ, ಅವರ ಅಷ್ಟು ಮುಂದಿನ ವಾರ್ಷಿಕ ವೇತನ ಬಡ್ತಿಗಳನ್ನು ಪಡೆಯಲು ಅವರುಗಳು ಅರ್ಹರಾಗುವುದಿಲ್ಲ.<br><br>ಗುತ್ತಿಗೆ ಆಧಾರದಲ್ಲಿ ನೇಮಕಗೊಂಡು ಸಲ್ಲಿಸಿದ ಸೇವೆಯನ್ನು ವೇತನ ನಿಗಧಿಗೆ ಪರಿಗಣಿಸುವಂತೆ ಕೋರಿ ಅರ್ಜಿದಾರರುಗಳು ಮಾನ್ಯ ನ್ಯಾಯಾಲಯದ ಮೊರೆ ಹೋಗಿದ್ದ ಪ್ರಕರಣದಲ್ಲಿ ಸರ್ಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ಸಿವಿಲ್ ಅಪೀಲು ಸಂಖ್ಯೆ:525-641 C/W ಎಸ್.ಎಲ್.ಪಿ.(ಸಿವಿಲ್) ಸಂಖ್ಯೆ:6456-6606/2000, ಸಿವಿಲ್ ಅಪೀಲು ಸಂಖ್ಯೆ:3491/2000 ಮತ್ತು ಸಿವಿಲ್ ಅಪೀಲು ಸಂಖ್ಯೆ:3747-3748/2000ರಲ್ಲಿನ ದಿನಾಂಕ:26-04-2002ರ ತೀರ್ಪಿನಲ್ಲಿ ಸರ್ಕಾರದ ಅರ್ಜಿಯನ್ನು ಪುರಸ್ಕರಿಸಿ, ಅರ್ಜಿದಾರರ ಪ್ರಕರಣದಲ್ಲಿ ನೀಡಲಾದ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶಗಳನ್ನು ವಜಾಗೊಳಿಸಿ, ಆದೇಶಿಸಿರುತ್ತದೆ. ತೀರ್ಪಿನ ಉದ್ಧೃತ ಭಾಗ ಈ ಕೆಳಕಂಡಂತಿದೆ-<br><br>*"The expression 'local candidate' and Rule-41A of the Karnataka Civil Services Rules and Note 7 to Rule 41 was however interpreted in a very strained* |
| ಆ) | ವಿಶೇಷ ನಿಯಮಗಳನುಸಾರ ಸಕ್ರಮಾತಿಗೊಂಡಿರುವ ಶಿಕ್ಷಕರು ಮತ್ತು ಉಪನ್ಯಾಸಕರ ಪೈಕಿ ಕೆಲವರು ಸೇವೆಯಲ್ಲಿ ಮುಂದುವರೆದಿದ್ದರೆ, ಇನ್ನೂ ಕೆಲವರು ಈಗಾಗಲೇ ನಿವೃತ್ತಿ ಮತ್ತು ಮರಣ ಹೊಂದಿದ್ದು, ವೇತನ ಮತ್ತು ಪಿಂಚಣಿ ಪುನರ್ ನಿಗದಿಪಡಿಸುವ ನಿರ್ಧಾರವನ್ನು ಸರ್ಕಾರ ಪರಿಶೀಲಿಸಬಾರದೇ: | |

*manner by the Tribunal to uphold the contention raised on behalf of the petitioners.*

*Such a situation in the present case will not arise at all because it is not the continuation of the original appointment made which is one a contract basis and contract comes to an end either on the expiry of the term or on a regular candidate reporting to duty particularly when the contract itself makes it clear that the service shall not be counted for any purpose, the claim of the respondents could not have been brought under Rule-41A at all."*

ಮಾನ್ಯ ಸರ್ವೋಚ್ಚ ನ್ಯಾಯಾಲದಯ ತೀರ್ಪಿನ ಹಿನ್ನೆಲೆಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 59 ಎಸ್‌ಇಡಬ್ಲ್ಯೂ 97 ದಿನಾಂಕ:20-06-2002ರಲ್ಲಿ ಶಿಕ್ಷಕರು ಗುತ್ತಿಗೆ ಆಧಾರದ ಮೇಲೆ ಸಲ್ಲಿಸಿದ ಸೇವೆಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳು, ನಿಯಮ 41(ಎ)ರಡಿಯಲ್ಲಿ ಸೌಲಭ್ಯಕ್ಕಾಗಿ ಪರಿಗಣಿಸತಕ್ಕದ್ದಲ್ಲವೆಂದು ಸಂಬಂಧಿಸಿದ ಎಲ್ಲರಿಗೂ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿತ್ತು.

ಇದಲ್ಲದೆ, ಕರ್ನಾಟಕ ನಾಗರಿಕ ಸೇವಾ ನಿಯಮಗಳು, ನಿಯಮ 41(ಎ)ರಡಿಯಲ್ಲಿ ಪರಿಗಣಿಸಲು ಮತ್ತು ಅದರಂತೆ ಸೇವಾ ಸೌಲಭ್ಯವನ್ನು ವಿಸ್ತರಿಸಲು ಅವಕಾಶವಿರುವುದಿಲ್ಲ ವಾದ್ದರಿಂದ, ಇಲಾಖೆಯ ಸಂಬಂಧಿಸಿದ ಎಲ್ಲಾ ಸಕ್ಷಮ ಪ್ರಾಧಿಕಾರಿಗಳು ಈ ಅಂಶವನ್ನು ಗಮನದಲ್ಲಿಟ್ಟುಕೊಂಡು, ಇಂತಹ ಪ್ರಕರಣಗಳಲ್ಲಿ ಯಾವುದೇ ಕಾರಣಕ್ಕೂ ಶಿಕ್ಷಕರ ಗುತ್ತಿಗೆ ಆಧಾರದ ಮೇಲಿನ ಸೇವೆಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳು, ನಿಯಮ 41(ಎ)ರಡಿಯಲ್ಲಿ ಪರಿಗಣಿಸತಕ್ಕದ್ದಲ್ಲವೆಂದು ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 184 ಪಿಎಂಡಬ್ಲ್ಯೂ 2004 ದಿನಾಂಕ:28-04-2007ರಲ್ಲಿ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿತ್ತು.

ಮುಂದುವರೆದು, ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 409 ಡಿಜಿಡಿ 2013 (ಭಾಗ-2) ದಿನಾಂಕ:07-12-2017ರಲ್ಲಿ ಮಾರ್ಗಸೂಚಿಗಳನ್ನು ನಿಗದಿಪಡಿಸಿ, ಅದರನ್ವಯ ದಿನಾಂಕ:08-10-1993ರ ತಿದ್ದುಪಡಿ ನಿಯಮಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸುವಂತೆ ಸಂಬಂಧಿಸಿದ ಪ್ರಾಧಿಕಾರಗಳಿಗೆ ಸೂಚಿಸಲಾಗಿರುತ್ತದೆ.

ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 409 ಡಿಜಿಡಿ 2013(ಭಾಗ-2) ದಿನಾಂಕ: 07.12.2017 ರಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 12 ಎಸ್‌ಆರ್‌ಇ 97, ದಿ:08.10.1999 ರಲ್ಲಿ ತಿದ್ದುಪಡಿ ನಿಯಮಗಳು ಸರಿಯಾಗಿ ಅನುಷ್ಠಾನಗೊಳ್ಳದಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಖಾಯಂಗೊಂಡ ಗುತ್ತಿಗೆ ಆಧಾರದ ಉಪನ್ಯಾಸಕರ ವೇತನ ಮತ್ತು ಪಿಂಚಣಿಯನ್ನು ಪುನರ್ ನಿಗದಿಗೊಳಿಸಲು ಆದೇಶಿಸಲಾಗಿತ್ತು. ಆದರೆ, ಖಾಯಂಗೊಂಡ ಗುತ್ತಿಗೆ ಉಪನ್ಯಾಸಕರ/ಶಿಕ್ಷಕರ ನಿವೃತ್ತಿ ವೇತನ ಮತ್ತು ವೇತನ ಪುನರ್ ನಿಗದಿಪಡಿಸದಂತೆ ಕೋರಿರುವ ಬಗ್ಗೆ ಪರಿಶೀಲನೆಗಾಗಿ ಸರ್ಕಾರದ ಆದೇಶ ಸಂಖ್ಯೆ:ಇಡಿ 409 ಡಿಜಿಡಿ 2013(ಭಾಗ-2)

| | | |
|---|---|---|
| | | ದಿನಾಂಕ:03-02-2018ರಲ್ಲಿ ಶ್ರೀ ಶ್ರೀಕಂಠೇಗೌಡ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು.<br><br>ಸರ್ಕಾರದ ಆದೇಶ ಸಂಖ್ಯೆ: ಇಡಿ 409 ಡಿಜಿಡಿ 2013 (ಭಾಗ-3) ದಿನಾಂಕ: 17.01.2018 ರಲ್ಲಿ ಸದರಿ ಸಮಿತಿಯು ಸಲ್ಲಿಸಲಿರುವ ವರದಿಯನ್ನು ಪರಿಶೀಲಿಸಿ, ಸೂಕ್ತ ನಿರ್ಧಾರವನ್ನು ಕೈಗೊಳ್ಳುವವರೆಗೆ ತಾತ್ಕಾಲಿಕವಾಗಿ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 409 ಡಿಜಿಡಿ 2013(ಭಾಗ-2) ದಿನಾಂಕ:07-12-2017ರನ್ವಯ ಕ್ರಮ ಕೈಗೊಳ್ಳುವುದನ್ನು ತಡೆಹಿಡಿಯಲು ಆದೇಶಿಸಲಾಗಿತ್ತು.<br><br>ಅದರಂತೆ ಸಮಿತಿಯು ದಿನಾಂಕ:24-11-2021 ರಂದು ಸಲ್ಲಿಸಿರುವ ವರದಿಯ ಕುರಿತಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಆರ್ಥಿಕ ಇಲಾಖೆ ಮತ್ತು ಕಾನೂನು ಇಲಾಖೆಯ ಇಲಾಖೆಗಳು ನೀಡಿರುವ ಅಭಿಪ್ರಾಯಗಳನ್ನು ಪರಿಶೀಲಿಸಿ, ಸರ್ಕಾರದ ಆದೇಶ ಸಂಖ್ಯೆ: ಇಡಿ 409 ಡಿಜಿಡಿ 2013(ಭಾಗ-2) ದಿನಾಂಕ:29-11-2023ರಲ್ಲಿ "1990ರ ವಿಶೇಷ ನಿಯಮಗಳನ್ವಯ ಸರ್ಕಾರಿ ಸೇವೆಯಲ್ಲಿ ಖಾಯಂಗೊಂಡ ಗುತ್ತಿಗೆ ಆಧಾರದ ಉಪನ್ಯಾಸಕರ/ಶಿಕ್ಷಕರ ವೇತನವನ್ನು ಮತ್ತು ಪಿಂಚಣಿಯನ್ನು ನಿಗದಿಪಡಿಸುವ ಕುರಿತಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 184 ಪಿಎಂಡಬ್ಲ್ಯೂ 2004 ದಿನಾಂಕ:28-04-2007ರಲ್ಲಿ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 409 ಡಿಜಿಡಿ 2013(ಭಾ-2) ದಿನಾಂಕ:07-12-2017ರ ಸುತ್ತೋಲೆಯಲ್ಲಿನ ನಿರ್ದೇಶನಗಳನ್ನೇ ಯಥಾವತ್ತಾಗಿ ಜಾರಿ ಮಾಡುವ ಮೂಲಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 12 ಎಸ್‌ಆರ್‌ಇ 97 ದಿನಾಂಕ:08-10-1999ರ ತಿದ್ದುಪಡಿ ನಿಯಮಗಳನ್ನು ಅನುಷ್ಠಾನಗೊಳಿಸಲು ಆದೇಶಿಸಿದೆ ಹಾಗೂ ತಿದ್ದುಪಡಿ ನಿಯಮಗಳನುಸಾರ ಖಾಯಂಗೊಂಡ ಶಿಕ್ಷಕರು/ ಉಪನ್ಯಾಸಕರ ವೇತನ/ಪಿಂಚಣಿಯನ್ನು ಮರು ನಿಗದಿಗೊಳಿಸಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು." ಎಂದು ಆದೇಶ ಹೊರಡಿಸಲಾಗಿರುತ್ತದೆ. |
| ಇ) | ಘನ ಸರ್ವೋಚ್ಚ ನ್ಯಾಯಾಲಯವು ಪ್ರಕರಣವೊಂದರಲ್ಲಿ 'ನಿವೃತ್ತ ನೌಕರರಿಂದ ಅಥವಾ ಒಂದು ವರ್ಷದೊಳಗೆ ನಿವೃತ್ತಿ ಹೊಂದಲಿರುವ ಹಾಗೂ 5 ವರ್ಷಗಳಿಂದ ಹಿಂದಿನ ಅವಧಿಯಲ್ಲಿ ಪಾವತಿಸಲಾದ ಹೆಚ್ಚಿನ ಮೊತ್ತವನ್ನು ವಸೂಲಿ ಮಾಡುವಂತಿಲ್ಲ' ಎಂದು ಸಕ್ಷಮ ಪ್ರಾಧಿಕಾರಿಗಳಿಗೆ ನಿರ್ದೇಶನ ನೀಡಿರುವುದು ನಿಜವೇ? | ಪ್ರಸ್ತುತ ಸರ್ಕಾರವು ಅನುಷ್ಠಾನಗೊಳಿಸಲು ಆದೇಶಿಸಿರುವ ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 12 ಎಸ್‌ಆರ್‌ಇ 97 ದಿನಾಂಕ:08-10-1999ರಲ್ಲಿ 1990ರ ವಿಶೇಷ ನಿಯಮಗಳ ನಿಯಮ-4(1)ಕ್ಕೆ ತರಲಾಗಿರುವ ತಿದ್ದುಪಡಿಯಲ್ಲಿ ಈ ಕೆಳಕಂಡಂತೆ ಉಪಬಂಧ ಕಲ್ಪಿಸಲಾಗಿದೆ-<br><br>"Provided that no arrears of pay, on account of the fixation of pay of such contract teachers in accordance with sub-rule (1), shall be recovered"<br><br>ಮೇಲಿನ ತಿದ್ದುಪಡಿ ನಿಯಮಗಳನ್ವಯ ವೇತನ ಪುನರ್ ನಿಗದಿಪಡಿಸಿದ ನಂತರ ಈಗಾಗಲೇ ಹೆಚ್ಚುವರಿಯಾಗಿ ಪಡೆದಿರುವ ವೇತನ ಬಾಕಿಯನ್ನು ವಸೂಲು ಮಾಡಲು ಅವಕಾಶವಿರುವುದಿಲ್ಲವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. |

| | | |
|---|---|---|
| ಈ) | ಇದೀಗ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡು ಖಾಯಂ ಆಗಿರುವ ಶಿಕ್ಷಕರು/ ಉಪನ್ಯಾಸಕರ ವೇತನವನ್ನು ಪುನರ್ ನಿಗದಿಪಡಿಸಲು ಸರ್ಕಾರ ಮುಂದಾಗಿರುವುದು ಏಕೆ: (ಸಂಪೂರ್ಣ ಮಾಹಿತಿ ನೀಡುವುದು) | 1990ರ ವಿಶೇಷ ನಿಯಮಗಳ ನಿಯಮ-4(1)ಕ್ಕೆ ತಿದ್ದುಪಡಿ ತರಲಾಗಿರುವ ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 12 ಎಸ್ಆರ್ಇ 1997 ದಿನಾಂಕ:08-10-1999ರ ತಿದ್ದುಪಡಿ ನಿಯಮಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ:525-641 c/w ಎಸ್.ಎಲ್.ಪಿ.(ಸಿವಿಲ್) ಸಂಖ್ಯೆ:6456-6606/2000, ಸಿವಿಲ್ ಅಪೀಲು ಸಂಖ್ಯೆ:3491/2000 ಮತ್ತು ಸಿವಿಲ್ ಅಪೀಲು ಸಂಖ್ಯೆ:3747-3748/2000ರಲ್ಲಿನ ದಿನಾಂಕ:26.04.2002ರ ತೀರ್ಪಿಗೆ ಅನುಗುಣವಾಗಿರುವುದರಿಂದ ಸದರಿ ತಿದ್ದುಪಡಿ ನಿಯಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 409 ಡಿಜಿಡಿ 2013(ಭಾಗ-2) ದಿನಾಂಕ:29-11-2023ರಲ್ಲಿ ಕ್ರಮವಹಿಸಲಾಗುತ್ತಿದೆ. |
| ಉ) | ಸರ್ಕಾರದ ಆದೇಶದನ್ವಯ ಖಾಯಂ/ ಸಕ್ರಮಾತಿ/ ವಿಲೀನಗೊಂಡ ಗುತ್ತಿಗೆ ಶಿಕ್ಷಕರ ಹೆಸರು/ನಿವೃತ್ತಿ ವರ್ಷ/ ಸಕ್ರಮಾತಿಗೊಂಡ ಶಿಕ್ಷಕರ ಸಂಖ್ಯೆ/ ಈಗಾಗಲೇ ನಿವೃತ್ತಿ ಹೊಂದಿರುವ ಹಾಗೂ ನಂತರ ವರ್ಷಗಳಲ್ಲಿ ನಿವೃತ್ತಿ ಹೊಂದುವವರ ಸಂಖ್ಯೆ ಎಷ್ಟು? (ಮಾಹಿತಿ ನೀಡುವುದು). | ಸರ್ಕಾರದ ಆದೇಶದನ್ವಯ ಖಾಯಂ/ ಸಕ್ರಮಾತಿ/ ವಿಲೀನಗೊಂಡ ಗುತ್ತಿಗೆ ಶಿಕ್ಷಕರ ಹೆಸರು/ನಿವೃತ್ತಿ ವರ್ಷ/ ಸಕ್ರಮಾತಿಗೊಂಡ ಶಿಕ್ಷಕರ ಸಂಖ್ಯೆ/ ಈಗಾಗಲೇ ನಿವೃತ್ತಿ ಹೊಂದಿರುವ ಹಾಗೂ ನಂತರ ವರ್ಷಗಳಲ್ಲಿ ನಿವೃತ್ತಿ ಹೊಂದುವವರ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಪಟ್ಟಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ.<br><br>ಸರ್ಕಾರದ ಆದೇಶದನ್ವಯ ಖಾಯಂ/ ಸಕ್ರಮಾತಿ/ ವಿಲೀನಗೊಂಡ ಗುತ್ತಿಗೆ ಶಿಕ್ಷಕರ ಹೆಸರು/ನಿವೃತ್ತಿ ವರ್ಷ/ ಸಕ್ರಮಾತಿಗೊಂಡ ಶಿಕ್ಷಕರ ಸಂಖ್ಯೆ/ ಈಗಾಗಲೇ ನಿವೃತ್ತಿ ಹೊಂದಿರುವ ಹಾಗೂ ನಂತರ ವರ್ಷಗಳಲ್ಲಿ ನಿವೃತ್ತಿ ಹೊಂದುವವರ ಪ್ರೌಢ ಶಾಲಾ ಶಿಕ್ಷಕರುಗಳ ಪಟ್ಟಿಯನ್ನು ಅನುಬಂಧ-2ರಲ್ಲಿ ಒದಗಿಸಿದೆ. |

ಸಂಖ್ಯೆ: ಇಪಿ 117 ಡಿಜಿಡಬ್ಲ್ಯೂ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.